# ಉಳಿದಾವ ನೆನಪು: ಆಪ್ತ, ಆಡಕ...

ಅನುಭವ ಕಥನಗಳು, ಜೀವನ ಚಿತ್ರಗಳು ಹಾಗೂ ಆತ್ಮಕಥನಗಳು ಕನ್ನಡದಲ್ಲಿ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟಗೊಳ್ಳುತ್ತಿವೆ. ಸಾಹಿತಿಗಳು ಮಾತ್ರವಲ್ಲದೆ ವಿವಿಧ ಕ್ಷೇತ್ರಗಳಿಗೆ ಸೇರಿದವರು ತಮ್ಮ ಬದುಕಿನ ಕಥೆಗಳನ್ನು ನಿರೂಪಿಸುತ್ತಿದ್ದಾರೆ. ಈ ಬೆಳವಣಿಗೆಯನ್ನು ಕನ್ನಡ ಸಾಹಿತ್ಯ ಪಡೆದುಕೊಳ್ಳುತ್ತಿರುವ ವೈವಿಧ್ಯದ ರೂಪದಲ್ಲಿ ಗುರ್ತಿಸಬಹುದು. ಈ ಚಲನೆಯ ಭಾಗವಾಗಿ ಹಿರಿಯ ಪತ್ರಕರ್ತ ಪದ್ಮರಾಜ ದಂಡಾವತಿ ಅವರ '...ಉಳಿದಾವ ನೆನಪು' ಕೃತಿಯನ್ನು ಗಮನಿಸಬಹುದು.

ಪದ್ಮರಾಜರು ತಮ್ಮ ಕೃತಿಯನ್ನು 'ಪತ್ರಕರ್ತನ ವೃತ್ತಿಜೀವನದ ನೆನಪುಗಳು' ಎಂದು ಕರೆದಿದ್ದಾರೆ. 'ಪ್ರಜಾವಾಣಿ' ಪತ್ರಿಕೆಗೆ ಸೇರಿದಾಗಿನಿಂದ ನಿವೃತ್ತಿಯವರೆಗಿನ ಸುಮಾರು ನಾಲ್ಕು ದಶಕಗಳ ಅವಧಿಯ ವೃತ್ತಿಜೀವನದಲ್ಲಿನ ಈ ನೆನಪುಗಳು ಪತ್ರಕರ್ತರಾಗಿ ಪದ್ಮರಾಜರ ಪಯಣದ ಪರಿಚಯವನ್ನು ಮಾಡಿಕೊಡುವುದರ ಜೊತೆಗೆ, ಅವರು ಕಾರ್ಯ ನಿರ್ವಹಿಸಿರುವ 'ಪ್ರಜಾವಾಣಿ' ಪತ್ರಿಕೆಯ ಒಳಹೊರಗಿನ ಕೆಲವು ವಿದ್ಯಮಾನಗಳ ನೆನಪುಗಳನ್ನೂ ಕಟ್ಟಿಕೊಡುವಂತಿವೆ. '...ಉಳಿದಾವ ನೆನಪು' ಎನ್ನುವ ಶೀರ್ಷಿಕೆಯೇ ಕೃತಿಯ ಸ್ವರೂಪವನ್ನು ಸ್ಪಷ್ಟಪಡಿಸುವಂತಿದೆ. ತಮ್ಮ ವೃತ್ತಿಜೀವನದ ಎಲ್ಲ ಘಟನೆಗಳನ್ನು ದಾಖಲಿಸುವುದು ಲೇಖಕರ ಉದ್ದೇಶವಾಗಿಲ್ಲ. ದೀರ್ಘವಾದ ವೃತ್ತಿಜೀವನದಲ್ಲಿ ತಮಗೆ ಮುಖ್ಯವೆಂದು ತೋರಿದ ಘಟನೆಗಳನ್ನಷ್ಟೇ ಅವರು ದಾಖಲಿಸಿದ್ದಾರೆ. ಈ ಹೆಕ್ಕಿ ತೋರಿಸುವ ಸಂಪಾದಕ ಪ್ರವೃತ್ತಿಯಿಂದಾಗಿ ಪುಸ್ತಕದ ಓದಿಸಿಕೊಳ್ಳುವ ಗುಣ ಹೆಚ್ಚಾಗಿದೆ.

ಕೃತಿ ಒಳಗೊಂಡಿರುವ ಇಪ್ಪತ್ತಾರು ಅಧ್ಯಾಯಗಳಲ್ಲಿ ಲೇಖಕರ ಪತ್ರಿಕೋದ್ಯಮದ ಅನುಭವಗಳು ಕಿಕ್ಕಿರಿದಿವೆ. ಪತ್ರಿಕೋದ್ಯಮಕ್ಕೆ ಬರುವ ಮೊದಲಿನ ದಿನಗಳ ವೈಯಕ್ತಿಕ ಜೀವನದಲ್ಲಿನ ಸಂಘರ್ಷಗಳ ಕೆಲವು ವಿವರಗಳು ಕೃತಿಯಲ್ಲಿ ಇದ್ದರೂ, ಈ ಕೃತಿಯ ಕೇಂದ್ರದಲ್ಲಿರುವುದು ಪದ್ಮರಾಜ ದಂಡಾವತಿ ಎನ್ನುವ ಪತ್ರಕರ್ತ ಹಾಗೂ ಪ್ರಜಾವಾಣಿ ಪತ್ರಿಕೆ. ಇದು ಏಕಕಾಲಕ್ಕೆ ವ್ಯಕ್ತಿಗತ ಕಥನವಾಗಿರುವಂತೆಯೇ ಪತ್ರಿಕೆಯ ಒಂದು ಅವಧಿಯ ವಿದ್ಯಮಾನಗಳನ್ನು ಕಟ್ಟಿಕೊಡುವ ಪ್ರಯತ್ನವೂ ಆಗಿದೆ.

ನಾಲ್ಕು ದಶಕಗಳ ಅವಧಿಯಲ್ಲಿ ಪತ್ರಕರ್ತನಾಗಿ ತಮ್ಮ ಸಂಪರ್ಕಕ್ಕೆ ಬಂದ ಹಲವರನ್ನು ಪದ್ಮರಾಜರು ನೆನಪಿಸಿಕೊಂಡಿದ್ದಾರೆ. ಈ ನೆನಪುಗಳಲ್ಲಿ ಮೆಚ್ಚುಗೆ ಇರುವಂತೆ, ವಿಮರ್ಶೆಯೂ ಇದೆ. ಮೆಚ್ಚಿಕೊಳ್ಳುವಾಗ ಹೆಸರುಗಳನ್ನು ದಾಖಲಿಸುವ ಅವರು, ವಿಮರ್ಶೆಯ ಬಹಳಷ್ಟು ಸಂದರ್ಭದಲ್ಲಿ ಹೆಸರುಗಳನ್ನು ಉಲ್ಲೇಖಿಸುವ ಗೋಜಿಗೆ ಹೋಗುವುದಿಲ್ಲ.

ವಸ್ತು, ವ್ಯಕ್ತಿತ್ವ ಹಾಗೂ ಭಾಷೆ – ಮೂರೂ ಕಾರಣಗಳಿಗಾಗಿ ಈ ಕೃತಿ ಮುಖ್ಯವೆನ್ನಿಸುತ್ತದೆ. ಪತ್ರಿಕೆ ಹಾಗೂ ಪತ್ರಕರ್ತರ ಕುರಿತ ಪುಸ್ತಕಗಳು ಕನ್ನಡದಲ್ಲಿ ತೀರಾ ಕಡಿಮೆ.